Doc-10
T-P-2

Reg No BG 155 16-1-1969

52nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯಚ್ಚು ಸೇರಿ ವರ್ಷಕ್ಕೆ ರೂ. 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತಕ್ಕೆ ಆಸ್ಟ್ರೇಲಿಯಾ ಅಕ್ಕಿ ಬರಲಿದೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ.ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಟೈರ್ ಟ್ಯೂಬ್

ನವದೆಹಲಿ— ಕಾರ್, ಬಸ್ ಮುಂತಾದುವುಗಳ ಟೈರು ಟ್ಯೂಬು ಅವಶ್ಯ ಪದಾರ್ಥವೆಂದು ಸರ್ಕಾರ ಘೋಷಿಸಿದೆ—ರಾಜ್ಯ ಸರಕಾರಗಳು ಅವುಗಳ ಹಂಚಿಕೆ ಸರಬರಾಜು ವ್ಯವಹಾರದಲ್ಲಿ ಲಕ್ಷ್ಯ ಮಾಡಬಹುದು.

ಯಾತ್ರಿಕರ ಕಷ್ಟ

ಕೊಟ್ಟಾಯಂ— ಸಬರಮಲ್ಯಾ ಯಾತ್ರಿಕರ ಸ್ಪೆಷಲ್ ಬಸ್ಸು ಪ್ಲಾಪಳ್ಳಿ ಹತ್ತಿರ ಮುಗುಚಿಕೊಂಡು ಎಂಟು ಮಂದಿ ಗಾಯಗೊಂಡರು.

★

ಮೊದಲು ಸಮರವಿಲ್ಲದ ಒಪ್ಪಂದ

ನವದೆಹಲಿ— ಪಾಕಿಸ್ಥಾನ–ಭಾರತಗಳ ಬಗ್ಗೆ ವಿಲೇ ಆಗದಿರುವ ಸಮಸ್ಯೆಗಳ ವ್ಯವಸ್ಥೆಗೆ ಜಂಟಿ ಸಮಿತಿ ನೇಮಕವು 'ಸಮರವಿಲ್ಲದ" ಒಪ್ಪಂದದನಂತರವೆಂದು ತಿಳಿಸಲಾಗಿದೆ.

★

ನಾನು ಹಾಗೆ ಹೇಳಿಲ್ಲ

ಕರಾಚಿ— ಕಾಶ್ಮೀರ ವಿನೋಚನೆಗೆ ತಾವು ಜನತಾ ಯುದ್ಧ ಪ್ರತಿಪಾದಿಸಿರುವೆನೆಂದು ಪ್ರಕಟವಾಗಿರುವುದು ತಪ್ಪೆಂದೂ ತಾವು ಶಾಂತಿಪ್ರಿಯ ಮಾನವನೆಂದೂ ಮಾಜಿ ಏರ್ಮಾರ್ಷಲ್ ಅಸ್ಗರ್ ಖಾನ್ ರು ಹೇಳಿರುವರು.

○

ನವೀನ ರೀತಿಯ ಪಾರಿತೋಷಕ

ಬೆಂಗಳೂರು— ರಾಷ್ಟ್ರೀಕರಣ ಮಾಡಲ್ಪಟ್ಟ ಪಠ್ಯಪುಸ್ತಕಗಳಲ್ಲಿ ಕುಂದುಕೊರತೆ ಮತ್ತು ತಪ್ಪುಗಳಿಲ್ಲದಂತೆ ಮಾಡಲು, ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳು ಅಂತಹ ತಪ್ಪುಗಳನ್ನು ತೋರಿಸುವವರಿಗೆ ಬಹುಮಾನ ಕೊಡುವರೆಂದು ಪ್ರಕಟವಾಗಿದೆ.

ಚುನಾವಣಾ ಅಭ್ಯರ್ಥಿಗಳು

ಕೆಲ್ಕತ್ತಾ— ಪಶ್ಚಿಮ ಬಂ[redacted] ವಿಧಾನ ಮಧ್ಯಾವರ್ತಿ ಚುನಾವಣೆಗೆ 1019 ಮಂದಿ ಸ್ಪರ್ಧಿಗಳಿದ್ದಾರೆ.

ಕಾರ್ಯೋಕ್ಷೇತ್ರ

ಮೈಸೂರು— ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭವು ತಾ || 18 ಸಂಜೆ ಮಾನಸಗಂಗೋತ್ರಿಯ ಬಯಲು ಮಂಟಪದಲ್ಲಿ ನಡೆಯುವುದು.

●

ಬೈಕ್ ಸತ್ಯಾಗ್ರಹ

ಬೆಳಗಾಂ— ಕಳೆದ ವರ್ಷ ಮಳೆ ಅಭಾವದಿಂದ ಲೆವಿ ಕೊಡಲು ಶಕ್ತರಾಗದ ಕೆಲವು ರೈತರ ಮೇಲೆ ಮೊಖದ್ದಮೆ ಹಾಕಿರುವುದನ್ನು ಪ್ರತಿಭಟಿಸಿ ಈ ತಾಲ್ಲೂಕಿನ 100 ಮಂದಿ ರೈತರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಬೈಕ್ ಸತ್ಯಾಗ್ರಹ ನಡೆಸಿದರು.

○

ಚುನಾವಣಾ ಖರ್ಚು

ನಾಗಪುರ— ನಾಲ್ಕು ರಾಜ್ಯಗಳಲ್ಲಿನ ಮಧ್ಯವರ್ತಿ ಚುನಾವಣಾ ಖರ್ಚು 3.5 ಕೋಟಿ ರೂಪಾಯಿಗಳು.

ಶತಮಾನ ಜೀವಿತಕ್ಕೆ

ಅತಿ ಹೆಚ್ಚು ಆನಂದ ಬಯಸಬೇಡ — 8 ಗಂಟೆ ಕೆಲಸಮಾಡಿ, 8 ಗಂಟೆ ನಿದ್ರಿಸು — ಹೆದರುವ ಪ್ರಕೃತಿ ಹೊಂದಬೇಡ — ನಿನ್ನ ವಯಸ್ಸನ್ನು ಮರೆತು ಬಿಡು — ಅತಿ ಹೆಚ್ಚು ತಿನ್ನಬೇಡ ಮತ್ತು ಹೆಚ್ಚು ಕುಡಿಯಬೇಡ ; ಆಹಾರ ವಿಷಯದಲ್ಲಿ ಗಮನವಿಡು — ನಿಪ್ರೈ ಬರುವಂತಾದಾಗ ಸ್ವಲ್ಪ ಮಲಗಿಕೊ — ವ್ಯಾಯಾಮ ಮಾಡು — ಆಗಾಗ ಮನೆಯಿಂದ ಹೊರಕ್ಕೆ ಹೋಗಿರು — ಜೀವಿತ ಸನ್ನಿವೇಶ ಶುದ್ಧವಾಗಿರಲಿ — ಪರಸ್ಪರ ಸಹಾಯಕ್ಕೆ ಯತ್ನಿಸು.

ಆಸ್ಟ್ರೇಲಿಯಾ ಅಕ್ಕಿ

ನವದೆಹಲಿ— ಆಸ್ಟ್ರೇಲಿಯವು ಭಾರತಕ್ಕೆ 1.75 ಲಕ್ಷದ 10000 ಟ್ ಅಕ್ಕಿ ಮಾರಿದೆ – ಮುಂದಿನ ತಿಂಗಳಲ್ಲಿ ಆಸ್ಟ್ರೇಲಿಯಾದಿಂದ ಹಡಗಿನಲ್ಲಿ ಹೊರಡುತ್ತದೆ.

●

ಲಾಟರಿ

ಬೊಂಬಾಯಿ— ಮಹಾರಾಷ್ಟ್ರ ಸರ್ಕಾರವು ಲಾಟರಿ ನಡೆಸಲು ನಿರ್ಧರಿಸಿದೆ.

○

ಡಾ || ಎಂ ಸಿ ಮೋದಿಯವರು

ನೇತ್ರದಾನಿ ಪದ್ಮಭೂಷಣ ಡಾ || ಎಂ. ಸಿ. ಮೋದಿಯವರು ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ ತಾ || 20 ರಂದು ಉಚಿತ ನೇತ್ರ ಶಸ್ತ್ರಚಿಕಿತ್ಸೆ ನಡೆಸುವರು.

★

ಸರ್ಪಕ್ಕೆ ಆಪರೇಷನ್

ಪೋಲೆಂಡಿನ ಪ್ರೋಕ್ಲಾ ಪ್ರಾಣಿಪ್ರದರ್ಶನಾಲಯದಲ್ಲಿನ ಒಂದು ವಿಷ ಸರ್ಪದ ವಿಷಚೀಲದ ಹತ್ತಿರ ದುರ್ಮಾಂಸ ಬೆಳೆದು, ಆದರ ಜೀವಕ್ಕೆ ಅಪಾಯಕಾರಿಯಾಗಿ ಕಂಡುಬಂದಿತು. ಪೋಲೆಂಡಿನಲ್ಲಿ ಇಂತಹ ವಿಷಸರ್ಪಗಳು ಅಪರೂಪ ಪಶುಪ್ರಾಣಿ ತಜ್ಞರು ತಮಗೆ ಸರ್ಪದಿಂದ ಯಾವ ರೀತಿಯ ಅಪಾಯವೂ ಆಗದಂತೆ ರಕ್ಷಣಾ ಉಡುಪು ಧರಿಸಿ, ಅನ್ಯ ಔಷಧೋಪಚಾರ ಸಿದ್ಧಪಡಿಸಿಕೊಂಡು ಸರ್ಪದ ಮೇಲೆ ಶಸ್ತ್ರ ಚಿಕಿತ್ಸೆ ನಡೆಸಿ ದುರ್ಮಾಂಸವನ್ನು ತೆಗೆದುಹಾಕಿದರು.

ವುಡ್‌ಲಾಂಡ್ಸ್ 17-1-69 ರಿಂದ

.... ಮನಮೋಹಕ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ ....

ಆ ಮ್ಮ ನಾ ಮ್ಮ

ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ
ರಾಜೇಂದ್ರನಾಥ್, ಮದನಪುರಿ — ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ

[ದಿನ 3 ಪ್ರದರ್ಶನಗಳು]

ಆಪೆರಾ— 10-1-69 ರಿಂದ

— ಅತ್ಯಮೋಘ ತಮಿಳು ಚಿತ್ರ —

ಕಾದಲ್ ವಾಹನಂ

ನಟವರ್ಗ— ಎಂ. ಜಿ. ರಾಮಚಂದ್ರನ್, ತಾಯ್ ನಾಗೇಶ್, ಅಶೋಕ್
ಸ್ಯಾಂಡೋ ಚಿನ್ನಪ್ಪದೇವರ್, ಸುಂದರರಾಜ್ ಜಯಲಲಿತ, ಮನೋರಮ

.... ದಿನವಹಿ 3 ಆಟಗಳು ....

ಪುಸ್ತಕ ಸಮ್ಮೇಳನ

ನವದೆಹಲಿ — ಭಾರತದಲ್ಲಿ 1969 ರಿಂದ 1974 ರಲ್ಲಿ ಅಂತರ್ರಾಷ್ಟ್ರೀಯ ಪುಸ್ತಕ ಮೇಳ ಏರ್ಪಡಿಸಲು ಯೂ ಜಿ ಸಲಾ ಗಿದೆ.

ಹೊಸ ರೈಲ್ವೇ ಸ್ಟೇಷನ್

ಬೆಂಗಳೂರು— ರೂ. 27 ಲಕ್ಷದ ಹೊಸ ರೈಲ್ವೇ ಸ್ಟೇಷನ್ನನ್ನು ಉಪಪ್ರಧಾನಿ ಶ್ರೀ ಮೊರಾರ್ಜಿ ದೇಸಾಯಿ ಉದ್ಘಾಟಿಸಿದರು — ರೂ. 10 ಕೋಟಿಯ ಬೆಂಗಳೂರು ಸೇಲಂ ಮೀಟರ್‌ಗೇಜ್ ಲೈನಿನ ಬೆಂಗಳೂರು–ಧರ್ಮಪುರಿ ಸೆಕ್ಷನ್ ಲೈನನ್ನು ಉದ್ಘಾಟಿಸಿದರು — ಬೆಂಗಳೂರು–ಮದ್ರಾಸಿಗೆ ಕಂಟೇನರ್ ಸರ್ವಿಸ್ ಉದ್ಘಾಟಿಸಿದರು.

★

ಕಾರ್ಮಿಕೆಲ್ತು ಸಮ್ಮೇಳನ

ಲಂಡನ್— ಮುಕ್ತೊಂದು ಕಾರ್ಮಿಕೆಲ್ತು ಸಮ್ಮೇಳನವನ್ನು ಮುಂದಿನ ವರ್ಷ ಏರ್ಪಡಿಸಬೇಕೆಂದೂ, ಲಂಡನ್ನಿನಲ್ಲಲ್ಲದೆ ಬೇರೆಲ್ಲಾದರೂ ನಡೆಸಬೇಕೆಂದೂ ಬ್ರಿಟಿಷ್ ಪ್ರಧಾನಿ ಮಿ॥ ವಿಲ್ಸನ್ನರು ಹೇಳಿದರು.

★

ಚೀಣೀ ತಯಾರಿಕೆ ಆಯುಧ

ಕೊಹಿಮಾ— ರಕ್ಷಣಾ ಪಡೆಯವರು ಮೋಕ್ಕೇಕಚುಂಗಿನ ದೌರ್ಜನ್ಯ ನಾಗಾ ಕ್ಯಾಂಪುಗಳ ಮೇಲೆ ಛಾಪಿನಡೆಸಿ, ತುಂಬಾ ಚೀನಿ ತಯಾರಿಕೆಯ ಆಯುಧಗಳನ್ನು ವಶಪಡಿಸಿಕೊಂಡರು.

●

ಅಧ್ಯಕ್ಷ ಉಪಾಧ್ಯಕ್ಷರು

ಮೈಸೂರು— ಪೌರಸಭೆಯ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಎಂ ಎಸ್ ತಿಮ್ಮಯ್ಯ (ಸಂ. ರಂ) ಮತ್ತು ಶ್ರೀ ಕೆ ಎಸ್ ಸೋಮಸುಂದರಂ (ಕಾಂ) ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಎಂ ಶಿವಣ್ಣ (ಸಂ. ರಂ) ಮತ್ತು ಶ್ರೀ ಎಂ ಕೆ ರಾಮಕೃಷ್ಣ (ಕಾಂ) ಸ್ಪರ್ಧಿಸಿರುವರು.

SHAKTI SUDHA
A Superb Tonic

ಪ್ರಕಟಣೆ

ನಂ: ಡಿ.ಎಂ.ಎಸ್. 94-ಇಎಂಟಿ-251
ಬಿಎಲ್‌ಡಿ / 68-69

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ತಾ॥ 9 ನೇ ಜನವರಿ 1969

"1968-69 ರಲ್ಲಿ ಮೈಸೂರಿನ ಸರಕಾರಿ ವುಡ್‌ಯಾರ್ಡ್ ಮತ್ತು ಗಂಧದ ಕೋಠಿಯಲ್ಲಿ ಕ್ಲಾರ್ಕ್‌ರವರಿಗಾಗಿ ಒಂದು ಟೈಪ್ ವಸತಿ ನಿರ್ಮಿಸಲು ಟೆಂಡರ್" ಎಂದು ಅಕ್ಷರದಲ್ಲಿ ಬರೆದ ಮತ್ತು ಟೆಂಡರು ದಾರರಿಂದ ಸಹಿ ಆದ ಮೊಹರಾದ ಟೆಂಡರುಗಳನ್ನು ಅಪೇಕ್ಷೆಯುಳ್ಳ ಜನರಿಂದ, ಮೈಸೂರು-5 ರಲ್ಲಿರುವ, ಮೈಸೂರು ವಿಭಾಗದ, ವಿಭಾಗ ಅರಣ್ಯ ಅಧಿಕಾರಿಯವರು ಅಥವಾ ಇದೇ ಉದ್ದೇಶಕ್ಕಾಗಿ ಅವರಿಂದ ಅಧಿಕಾರಹೊಂದಿರುವ ಇತರ ಯಾವುದೇ ಅಧಿಕಾರಿಯವರಿಂದ 22 ನೇ ಜನವರಿ 1969 ರ ಮಧ್ಯಾಹ್ನ 4 ಗಂಟೆವರೆಗೆ ಆಹ್ವಾನಿಸಲಾಗಿದೆ. ಅದೇ ದಿನ ಮಧ್ಯಾಹ್ನ 4-15 ಗಂಟೆಗೆ ಹಾಜರಿರಬಯಸುವ ಟೆಂಡರುದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಸಮಕ್ಷಮ ಟೆಂಡರುಗಳನ್ನು ತೆರೆಯಲಾಗುವುದು.

ಕೆಲಸದ ಅಂದಾಜು ವೆಚ್ಚ 22000 ರೂ.ಗಳು (ಇಪ್ಪತ್ತೆರಡು ಸಾವಿರ ರೂಪಾಯಿಗಳು ಮಾತ್ರ).

ಆರ್ನೆಸ್ಟ್ ಠೇವಣಿ ಹಣ ರೂ. 550 (ಐನೂರು ಐವತ್ತು ರೂಪಾಯಿಗಳು) ಮಾತ್ರ, ಮೈಸೂರು ವಿಭಾಗದ ಅರಣ್ಯಾಧಿಕಾರಿಗಳ ಲೆಖ್ಖಕ್ಕೆ ಅವರ ಕಛೇರಿಯನ್ವಯ ಕೌಂಟರ್ ಸಹಿ ಮಾಡಲ್ಪಟ್ಟ ಚಲನ್‌ನಲ್ಲಿ ಮೈಸೂರಿನಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್ ರವರಲ್ಲಿ ಜಮಾ ಮಾಡಿ ಡೂಪ್ಲಿಕೇಟ್ ಚಲನ್‌ನನ್ನು ಟೆಂಡರ್ ಜೊತೆಗಿಲಗತ್ತಿಸಿರಬೇಕು.

ಪ್ರತಿ ಟೆಂಡರ್ ಫಾರಂನ ಬೆಲೆ ರೂ. 5 ಮಾತ್ರ (ಐದು ರೂಪಾಯಿಗಳು).

ಹೆಚ್ಚು ವಿವರಗಳು ಬೇಕಾದಲ್ಲಿ, ಮೈಸೂರು-5 ರಲ್ಲಿರುವ, ಮೈಸೂರು ವಿಭಾಗದ, ವಿಭಾಗ ಅರಣ್ಯ ಅಧಿಕಾರಿಯವರಿಂದ, ಯಾವುದೇ ಕೆಲಸದ ದಿನಗಳಲ್ಲಿ ಕಛೇರಿ ಕೆಲಸದ ವೇಳೆಗಳಲ್ಲಿ ಪಡೆಯಬಹುದು.

ಸಹಿ/— ಬಿ. ಬಾಲಯ್ಯ
ವಿಭಾಗ ಅರಣ್ಯ ಅಧಿಕಾರಿಯವರು
ಮೈಸೂರು ವಿಭಾಗ, ಮೈಸೂರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have layoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi Sri Opera Talkies, Padmabhushana Dr. M. C. Modi, Dr. R. S. Nanjunda swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Protect the Cow

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4